ಸಿ.ಸಿ .ನಂ. 225/2022 ಪಿಡಬ್ಲೂಃ 1

ದಿನಾಂಕಃ 06-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ವಾಯ್ ಆರ್ ಎಮ್ ವಕೀಲರಿಂದಃ**

9. ಈ ಸಾಲಕ್ಕೆ ಸಂಬಂಧಪಟ್ಟಂತೆ ಗಜಾನನ ಗೋಪಾಲಕೃಷ್ಣ ತಾಂಡೇಲ , ಆನಂದು ಕೃಷ್ಣಾ ಗೌಡಾ ಜಾಮೀನುದಾರರಾಗಿರುತ್ತಾರೆ . ನಮ್ಮ ಶಾಖೆಯಲ್ಲಿ ಸದಸ್ಯತ್ವ ಪಡೆದವರನ್ನು ಜಾಮೀನುದಾರರನ್ನಾಗಿ ಸ್ವೀಕರಿಸುತ್ತೇವೆ . ಅವರಿಂದ ಕೆವಾಯ್ ಸಿ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ . ಅವರ ವೇತನಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ . ಮೌಖಿಕ ಮಾಹಿತಿಯನ್ನು ಪಡೆದುಕೊಂಡಿರುತ್ತೇವೆ . ಸಾಲದ ಅರ್ಜಿಯಲ್ಲಿ ಅವರೇ ನಮೂದು ಮಾಡಿಕೊಡುತ್ತಾರೆ . ಆ ರೀತಿ ನಮೂದು ಮಾಡಿದ ನಂತರ ಅದನ್ನು ಪರಿಶೀಲಿಸುವ ಅಧಿಕಾರ ನಮ್ಮ ಶಾಖಾ ವ್ಯವಸ್ಥಾಪಕರಿಗೆ ಇರುತ್ತದೆ ಎಂದರೆ ಸರಿ . ಅದನ್ನು ಪರಿಶೀಲಿಸಿ ದಾಖಲಾತಿಗಳನ್ನು ನೋಡಿ ಅದನ್ನು ಆಡಳಿತ ಮಂಡಳಿಯವರಿಗೆ ಕಳುಹಿಸುವ ಜವಾಬ್ದಾರಿ ನಮ್ಮದಾಗಿರುತ್ತದೆ ಎಂದರೆ ಸರಿ . ಈ ಅರ್ಜಿಯನ್ನು ಪರಿಶೀಲಿಸಿ ಆಡಳಿತ ಮಂಡಳಿಯವರಿಗೆ ಕಳಿಸಿರುತ್ತೇವೆ . ಸಾಲಗಾರರಿಗೆ ಕೊಟ್ಟಂತಹ ದಾಖಲಾತಿಗಳನ್ನು ಕೂಡ ಪರಿಶೀಲನೆ ಮಾಡಿದ್ದೇವೆ . ಸಾಲದ ಅರ್ಜಿಯಲ್ಲಿ ವಾರ್ಷಿಕ ಉತ್ಪನ್ನ 1,50,000/- ನಮೂದು ಮಾಡಿದ್ದಾರೆ ಎಂದರೆ ಸರಿ . ಆ ರೀತಿಯಾದಂತಹ ದಾಖಲಾತಿಗಳನ್ನು ಅವರಿಂದ ಪಡೆದುಕೊಂಡಿಲ್ಲ. ಸಾಲದ ಅರ್ಜಿಯ 4 ನೇ ಕಾಲಂನಲ್ಲಿ ಖಾಲಿಯಾಗಿ ಬಿಟ್ಟಿದ್ದೇವೆ ಎಂದರೆ ಸರಿ . ಸದರಿ ಕಾಲಂಗೆ ಸಂಬಂಧಪಟ್ಟಂತೆ ಅವರಿಂದ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ . ಸಾಲ ಮಂಜೂರು ಆದ ನಂತರ ಸಾಕ್ಷಿದಾರರ ಸಹಿಗಳನ್ನು ಹಾಗೂ ಅವರ ವಿಳಾಸವನ್ನು ಪಡೆಯುವ ಫಾರ್ಮೆಟ್ ಇದೆ . ಈ ಸಾಲಕ್ಕೆ ಸಂಬಂಧಪಟ್ಟಂತೆ ನಿಪಿ -10 ರಿಂದ ನಿಪಿ-12 ರಲ್ಲಿ ಯಾವುದೇ ಸಾಕ್ಷಿದಾರರ ಸಹಿ ಹಾಕಿಲ್ಲ ಎಂದರೆ ಸಾಕ್ಷಿ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಳ್ಳಬಹುದು , ಪಡೆದುಕೊಳ್ಳದೇ ಇರಬಹುದು ಎಂದು ನುಡಿದಿರುತ್ತಾರೆ . ನಾನು ಹೇಳುವ

ಪಿಡಬ್ಲೂಃ 1

ಪ್ರಕಾರ ಈ ಸಾಲದ ಅರ್ಜಿ ಮಂಜೂರು ಆದದ್ದು ಇಲ್ಲ ನಾವು ಸಾಲವನ್ನು ನೀಡಿದ್ದು ಇಲ್ಲ ಎಂದರೆ ಸರಿಯಲ್ಲ. ನಾವು ಹಾಜರು ಪಡಿಸಿದ ದಾಖಲಾತಿಗಳಲ್ಲಿ ನಾವೇ ನಮೂದು ಮಾಡಿ ಬರೆದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಲಗಾರರಿಂದ ಸಾಲಕ್ಕೆ ಸಂಬಂಧಪಟ್ಟಂತೆ ಕೆವಾಯ್ ಸಿ ದಾಖಲಾತಿಗಳನ್ನು ಹೊರತು ಪಡಿಸಿ ಬೇರೆ ದಾಖಲಾತಿಗಳನ್ನು ಪಡೆದುಕೊಂಡಿಲ್ಲ . ಅವರ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ. ನಾನು ಹೇಳುವ ಪ್ರಕಾರ ಆರೋಪಿ ಯಾವತ್ತೂ ನಮಗೆ ಕಾನೂನುಬದ್ಧವಾಗಿ ಭರಿಸುವಂತಹ ಹಣ ಇಲ್ಲ ಎಂದರೆ ಸರಿಯಲ್ಲ . ಫಿರ್ಯಾದಿನಲ್ಲಿ ಸುಳ್ಳು ಬರೆದು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ . ನಾನು ಹೇಳುವ ಪ್ರಕಾರ ನಮ್ಮ ಸಂಸ್ಥೆಗೆ ಯಾವುದೇ ಕರಾರು ಪತ್ರವಾಗಲೀ , ಡಿಮಾಂಡ ಪ್ರಾಮಿಸರಿ ನೋಟ್ ಆಗಲೀ ಬರೆದುಕೊಟ್ಟಿದ್ದು ಇಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.